# ಪೀಡೆನಾಶಕ ಬಳಕೆಯ ಸಂದರ್ಭದಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆಗಳು :

ರೈತ ಬೆಳೆಯುವ ಯಾವುದೇ ಬೆಳೆಯಲ್ಲಿ ಯಾವುದೇ ಬೆಳೆಯ ಇಳುವರಿಯ ಮೇಲೆ ಆಯಾ ಬೆಳೆಯಲ್ಲಿ ಬಂದೊದಗಬಹುದಾದ ಕೀಟ ಮತ್ತು ರೋಗಗಳ ಭಾದೆಯು ಪ್ರಮುಖ ಪಾತ್ರ ವಹಿಸುತ್ತದೆ. ಅಂತೆಯೇ, ಬೆಳೆಯ ಉತ್ಪಾದನಾ ವೆಚ್ಚವನ್ನು ಮಿತವ್ಯಯಗೊಳಿಸುವಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳ ಪಾತ್ರ ಮುಖ್ಯ ಅಂಶಗಳಲ್ಲೊಂದು. **ಇದು** ಸಂಪೂರ್ಣವಾಗಿ ಅಲ್ಲದೇ ಇದ್ದರೂ ಪೀಡೆ ಹತೋಟಿಯ ಅಂಗವಾಗಿದೆ ಎಲ್ಲದಕ್ಕಿಂತ ಮಿಗಿಲಾಗಿ, ಪೀಡೆನಾಶಕಗಳ ವಿವೇಚನಾಯುಕ್ತ ಸುರಕ್ಷಿತ ಬಳಕೆಯ ಮೂಲಕ ಪರಿಸರ ಸಂರಕ್ಷಣೆ ಸಾಧ್ಯವಾಗುವುದರ ಜೊತೆಗೆ ಗುಣಮಟ್ಟದ ಉತ್ಪನ್ನ ಪಡೆಯಲು ಸಾಧ್ಯ. ಈ ದಿಸೆಯಲ್ಲಿ ಪೀಡೆನಾಶಕಗಳ ಉಪಯೋಗ ಕುರಿತಂತೆ ರೈತರು-ಸಾಮಾನ್ಯ ಜನರಲ್ಲಿ ಅರಿವು ಮೂಡಿಸಲು ಪೀಡೆನಾಶಕಗಳ ಬಳಕೆಯಲ್ಲಿ ಅನುಸರಿಸಬೇಕಾದ/ಅಳವಡಿಸಿಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವಿದೆ.

**ವಿಷದ ಚಿಹ್ನೆ ಮತ್ತು ವಿಷದ ಪ್ರಮಾಣವನ್ನು ಮನುಷ್ಯ ಮತ್ತು ಪ್ರಾಣಿಗಳಿಗೆ ಸೂಚಿಸುತ್ತದೆ.**

ಮಕ್ಕಳಿಗೆ ನಿಲುಕದಂತೆ ದೂರವಿಡಿ, ಒಂದು ವೇಳೆ ನುಂಗಿದಲ್ಲಿ ಅಥವಾ ವಿಷದ ಲಕ್ಷಣ ಕಂಡು ಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಿ.

ವರ್ಗ –1 (ಅತ್ಯಂತ ವಿಷಕಾರಿ)
ಎಲ್ ಡಿ.50 (ಆಹಾರದ ಮುಖಾಂತರ ಮಿಲಿಗ್ರಾಂ/ಕೆಜಿ)1 ರಿಂದ 50
ಎಲ್ ಡಿ.50 (ಚರ್ಮದ ಮುಖಾಂತರ ಮಿಲಿಗ್ರಾಂ/ಕೆಜಿ)1 ರಿಂದ 200 ಕೆಂಪು




ಮಕ್ಕಳಿಗೆ ನಿಲುಕದಂತೆ ದೂರವಿಡಿ
ವರ್ಗ 2 (ಅತಿ ವಿಷಕಾರಿ)
ಎಲ್ ಡಿ.50 (ಆಹಾರದ ಮುಖಾಂತರ ಮಿಲಿಗ್ರಾಂ/ಕೆಜಿ)51 ರಿಂದ 500
ಎಲ್ ಡಿ.50 (ಚರ್ಮದ ಮುಖಾಂತರ ಮಿಲಿಗ್ರಾಂ/ಕೆಜಿ)201 ರಿಂದ 2000 ಹಳದಿ




ಮಕ್ಕಳಿಗೆ ನಿಲುಕದಂತೆ ದೂರವಿಡಿ
ವರ್ಗ 3 (ಸಾಧಾರಣ ವಿಷಕಾರಿ)
ಎಲ್ ಡಿ.50 (ಆಹಾರದ ಮುಖಾಂತರ ಮಿಲಿಗ್ರಾಂ/ಕೆಜಿ)501 ರಿಂದ 5000
ಎಲ್ ಡಿ.50 (ಚರ್ಮದ ಮುಖಾಂತರ ಮಿಲಿಗ್ರಾಂ/ಕೆಜಿ)2001 ರಿಂದ 20000 ನೀಲಿ




ವರ್ಗ 4 (ಅಲ್ಪ ವಿಷಕಾರಿ)
ಎಲ್ ಡಿ.50 (ಆಹಾರದ ಮುಖಾಂತರ ಮಿಲಿಗ್ರಾಂ/ಕೆಜಿ)> 5000
ಎಲ್ ಡಿ.50 (ಚರ್ಮದ ಮುಖಾಂತರ ಮಿಲಿಗ್ರಾಂ/ಕೆಜಿ)> 20000 ಹಸಿರು



## ಸಿಂಪರಣೆಗೆ ಮುನ್ನ ಮತ್ತು ಸಿಂಪರಣೆ ಸಮಯದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು

1 ಚೀಟಿಯಲ್ಲಿರುವ ಸಲಹೆಗಳನ್ನು ಎಚ್ಚರಿಕೆಯಿಂದ ಓದುವುದರೊಂದಿಗೆ ಸಿಂಪರಣೆಗೆ ಮುಂಚೆ ಅಗತ್ಯವಿರುವ ಎಲ್ಲಾ ಸೂಚನೆಗಳನ್ನು ಪಾಲಿಸಿರುವ ಬಗ್ಗೆ ದೃಢಪಡಿಸಿಕೊಳ್ಳಿ.



2 ಸಿಂಪರಣಾ ಯಂತ್ರವು ಸೋರದಂತೆ, ಮಿಶ್ರಣ ಚೆಲ್ಲದಂತೆ ಮತ್ತು ಸಿಂಪರಣೆಗೆ ಸೂಕ್ತ ರೀತಿಯಲ್ಲಿ ಯಂತ್ರ ಅಳವಡಿಸಿರುವುದನ್ನು ಪರೀಕ್ಷಿಸಿಕೊಳ್ಳಿ.



3 ಹೆಚ್ಚಿನ ಗಾಳಿಯ ಒತ್ತಡದಿಂದ ಅನಗತ್ಯವಾಗಿ ಗಾಳಿಯಲ್ಲಿ ರಾಸಾಯನಿಕ ವಿಲೀನವಾಗುವುದನ್ನು ತಡೆಗಟ್ಟಲು ಸಿಂಪರಣೆ ಯಾವ ರೀತಿಯಲ್ಲಿ ಕೈಗೊಳ್ಳಬೇಕೆಂಬ ಯೋಜನೆಯನ್ನು ರೂಪಿಸಿರಿ.



4 ಕೈಗವಚ/ರಕ್ಷಣೆಯ ವಸ್ತ್ರ, ಉಸಿರಾಟ ಕವಚ ಮತ್ತು ಇತರೇ ಸುರಕ್ಷತೆಯ ಉಪಕರಣಗಳನ್ನು ಧರಿಸಿರಿ.




5 ರಾಸಾಯನಿಕ ಡಬ್ಬಿಯು ಕುಲುಕಾಡದಂತೆ, ವಿಷ ಚೆಲ್ಲದಂತೆ ಬಾಟಲಿಯ ಮುಚ್ಚಳವನ್ನು ಎಚ್ಚರದಿಂದ ತೆಗೆಯಿರಿ.



6 ಮುಕ್ತ ಆವರಣದಲ್ಲಿ ರಾಸಾಯನಿಕಗಳನ್ನು ಮಿಶ್ರಣ ಮಾಡಿರಿ. (ಆಯಾ ಸಿಂಪರಣೆಗೆ ಬೇಕಾದ ಪ್ರಮಾಣದಲ್ಲಿ ಮಿಶ್ರಣ ಮಾಡಿರಿ)



7 ಗಾಳಿ ರಭಸ ಹೆಚ್ಚಿದ್ದಾಗ ಪೀಡೆನಾಶಕಗಳನ್ನು ಮಿಶ್ರಣ ಮಾಡುವುದಾಗಲೀ ಅಥವಾ ಸಿಂಪರಣಾ ಯಂತ್ರದಲ್ಲಿ ತುಂಬುವುದಾಗಲಿ ಮಾಡಬಾರದು. ಗಾಳಿಯ ವಿರುದ್ಧ ದಿಕ್ಕಿನಲ್ಲಿ ಎಂದೂ ಸಿಂಪರಿಸಕೂಡದು.



8 ಎರಡು ಅಥವಾ ಎರಡಕ್ಕಿಂತ ಹೆಚ್ಚು ಕೃಷಿ ರಾಸಾಯನಿಕಗಳನ್ನು ಮಿಶ್ರಣ ಮಾಡಬೇಕಾದಲ್ಲಿ ಅವುಗಳು ಒಂದಕ್ಕೊಂದು ರಾಸಾಯನಿಕ ಕ್ರಿಯೆಗೆ ಒಳಗಾಗದೇ ಹೊಂದಿಕೊಳ್ಳುವಂತಿರಬೇಕು.



9 ಸಿಂಪರಣಾ ಯಂತ್ರದ ಮುಚ್ಚಿದ ತುದಿಯನ್ನು ಬಾಯಿಯಲ್ಲಿ ಹಿಡಿದು ಊದುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಯಂತ್ರದ ತುದಿಯನ್ನು ನೀರಿನಿಂದ ಅಥವಾ ಚೂಪಾದ ವಸ್ತುವಿನಿಂದ ಸ್ವಚ್ಛಗೊಳಿಸಿ. ಉದಾಃ ಹುಲ್ಲಿನ ಕಡ್ಡಿಯಿಂದ.

10 ಕೃಷಿ ರಾಸಾಯನಿಕಗಳನ್ನು ಸರಿಯಾದ ಪ್ರಮಾಣದಲ್ಲಿ ಉದ್ದೇಶಿತ ಸಸ್ಯ ಸಂರಕ್ಷಣಾ ಕಾರ್ಯಕ್ಕೆ ಮಾತ್ರ ಬಳಸಿರಿ.

11 ಪೀಡೆನಾಶಕದ ಸಿಂಪರಣೆ ಮತ್ತು ಕೊಯ್ಲಿನ ಮಧ್ಯೆ ಸಾಕಷ್ಟು ಸಮಯ ನೀಡುವುದರಿಂದ ಕೃಷಿ ಉತ್ಪನ್ನಗಳಲ್ಲಿ ಪೀಡೆನಾಶಕ ಶೇಷಾಂಶ ಉಳಿಕೆಯ ಪ್ರಮಾಣವನ್ನು ಕಡಿಮೆಗೊಳಿಸುವುದರೊಂದಿಗೆ ಗುಣಮಟ್ಟದ ಉತ್ಪನ್ನ ಪಡೆಯಬಹುದು.

12 ಸಿಂಪರಣೆ ಸಮಯದಲ್ಲಿ ತಿನ್ನುವುದಾಗಲಿ, ಕುಡಿಯುವುದಾಗಲೀ ಅಥವಾ ಧೂಮಪಾನ ಮಾಡಕೂಡದು.



13 ಪೀಡೆನಾಶಕಗಳ ಸಂಪರ್ಕದಿಂದ ಮಕ್ಕಳನ್ನು ದೂರವಿಡಿ.



14 ರಾಸಾಯನಿಕ ಖಾಲಿ ಡಬ್ಬ, ಸಿಂಪರಣಾ ಉಪಕರಣ ತೊಳೆದ ನೀರು ಮತ್ತು ಮಿಕ್ಕ ಪೀಡೆನಾಶಕವನ್ನು ಯಾವುದೇ ನೀರಿನ ಮೂಲವನ್ನು ಸೇರಿ ಮಲಿನಗೊಳಿಸದಂತೆ ಸುರಕ್ಷಿತವಾಗಿ ನಾಶಪಡಿಸಿರಿ.

15 ಸಿಂಪರಣೆ ಸಮಯದಲ್ಲಿ ಅನಾರೋಗ್ಯ ತೊಂದರೆಗಳು ಕಾಣಿಸಿಕೊಂಡಲ್ಲಿ ತಕ್ಷಣ ಕೆಲಸವನ್ನು ನಿಲ್ಲಿಸಿ ಸೂಕ್ತ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಿರಿ.




**ಸಿಂಪರಣೆ ನಂತರ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು :**

1 ಉಪಯೋಗಿಸಿದ ಕೃಷಿ ರಾಸಾಯನಿಕಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ ರಾಸಾಯನಿಕದ ಖಾಲಿ ಡಬ್ಬಿಗಳನ್ನು ಮತ್ತು ಸಿಂಪರಣಾ ಯಂತ್ರದಲ್ಲಿ ಮಿಕ್ಕಿದ ರಾಸಾಯನಿಕವನ್ನು ಸುರಕ್ಷಿತವಾಗಿಡಿ ಇಲ್ಲವೆ ನಾಶಪಡಿಸಿರಿ.



2 ಸಿಂಪರಣಾ ಯಂತ್ರವನ್ನು ಚೆನ್ನಾಗಿ ಸ್ವಚ್ಛಗೊಳಿಸಿ.

3 ಪೀಡೆನಾಶಕದಿಂದ ಸೋಂಕಿತ ಕೈಗಳನ್ನು ಮತ್ತು ದೇಹದ ಇತರೆ ಭಾಗಗಳನ್ನು ಸಾಬೂನಿನಿಂದ ಸ್ವಚ್ಛಗೊಳಿಸಿ ಚೆನ್ನಾಗಿ ಸ್ನಾನ ಮಾಡಿರಿ



4 ಸಿಂಪರಣಾ ದಾಖಲೆಗಳನ್ನು ಇಡಿ. ಉದಾಃ ಯಾವ ರಾಸಾಯನಿಕ ಮತ್ತು ಸಿಂಪರಣಾ ದ್ರಾವಣದ ಪ್ರಮಾಣ ಇತ್ಯಾದಿ.



5 ಬಳಸದೇ ಇರುವ ಸಿಂಪರಣಾ ದ್ರಾವಣವನ್ನು ನೀರಿನ ನೆಲೆ,ಹಳ್ಳ,ಕೆರೆ ಹಾಗೂ ಬಾವಿಯಲ್ಲಿ ಚೆಲ್ಲಬೇಡಿ.



6 ಸಿಂಪರಿಸಿದ ಬೆಳೆ ಕ್ಷೇತ್ರವನ್ನು ಗುರುತು ಮಾಡಿ ಮತ್ತು ಸಿಂಪರಣೆಯ ನಂತರ ಕೆಲಕಾಲ ಈ ಪ್ರದೇಶದಲ್ಲಿ ಅಡ್ಡಾಡುವುದನ್ನು ತಪ್ಪಿಸಿ.

1. **ವಿಷಮತೆಯ ನಿರ್ವಹಣೆ :**

ವಿಷಕಾರಿ ವಸ್ತುಗಳು ದೇಹದಲ್ಲಿ ಸಂಗ್ರಹವಾದಾಗ ಧೀರ್ಘ ಕಾಲದ ವಿಷವಾಗಿ (ವ್ಯಾಧಿ) ಪರಿಣಮಿಸಿ ದೇಹದ ಕೆಲ ಮುಖ್ಯ ಅಂಗಾಂಗಗಳಾದ ಪಿತ್ತಜನಕಾಂಗ, ಮೂತ್ರಜನಕಾಂಗ, ಮೆದುಳು ಅಥವಾ ನರಗಳ ವ್ಯವಸ್ಥೆ ಹಾನಿಗೊಳಗಾಗುತ್ತವೆ.

2. **ವಿಷಮತೆಯ ಗುರುತು ಹಾಗೂ ಲಕ್ಷಣಗಳು:**

1. **ಸಾಮಾನ್ಯ** : ವಿಪರೀತ ನಿಶ್ಯಕ್ತಿ ಮತ್ತು ಬಳಲುವಿಕೆ.
2. **ಚರ್ಮ** : ಸಿಟ್ಟಾಗುವಿಕೆ, ರೇಗುವುದು, ವಿಪರೀತ ಬೆವರುವಿಕೆ.
3. **ಕಣ್ಣುಗಳು** : ಕಡಿತ ಅಥವಾ ತುರಿಕೆ, ಉರಿ, ನೀರುಬರುವಿಕೆ, ಪ್ರಯಾಸದ ಅಥವಾ ಅಸ್ಪಷ್ಟ ನೋಟ, ಕಿರಿದಾದ ಕಣ್ಣಿನ ಗೊಂಬೆ
4. **ಜೀರ್ಣಾಂಗ** : ಬಾಯಿಯಲ್ಲಿ ಉರಿ, ಅತಿಯಾದ ಜೊಲ್ಲು ಬರುವಿಕೆ, ವಾಕರಿಕೆ ಬಂದಂತಾಗುವುದು, ವಾಂತಿ, ಹೊಟ್ಟೆನೋವು , ಬೇಧಿ.
5. **ನರವ್ಯೂಹ:** ತಲೆನೋವು , ತಲೆ ತಿರುಗು, ಗೊಂದಲ, ತಾಳ್ಮೆಯಿಲ್ಲದಿರುವುದು, ಮಾಂಸ ಖಂಡಗಳ ಸ್ನಾಯು ಸೆಳೆತ, ತೊದಲು ಮಾತು, ಮೂರ್ಛೆ.
6. **ಉಸಿರಾಟ ಕ್ರಿಯೆ:** ಕೆಮ್ಮು, ಎದೆನೋವು , ಬಿಗಿಯಾದ ಮತ್ತು ತೊಂದರೆದಾಯಕ ಉಸಿರಾಟ, ಉಬ್ಬಸ.

ವ್ಯಕ್ತಿಯು ವಿಷಮತೆಯಿಂದ ಬಳಲುತ್ತಿದ್ದು ಒಂದು ವೇಳೆ ವಿಷ ಹೊಂದಿರುವುದು ಖಾತ್ರಿಯಾದಲ್ಲಿ, ಮೊದಲು ಪ್ರಥಮ ಚಿಕಿತ್ಸೆ ನೀಡಿ ನಂತರ ವೈದ್ಯರ ಸಹಾಯವನ್ನು ಸಾಧ್ಯವಾದಷ್ಟು ಬೇಗ ಪಡೆದುಕೊಳ್ಳಬೇಕು. ವಿಷದ ಕುರಿತು ಮಾಹಿತಿ ಮತ್ತು ಕರಪತ್ರವನ್ನು ಹಾಗೂ ರೋಗಿಯ ಇತಿಹಾಸ ಕುರಿತು ವೈದ್ಯರಿಗೆ ತೋರಿಸಿರಿ.

**ಪ್ರಥಮ ಚಿಕಿತ್ಸೆ :**

ವಿಷದಿಂದ ಬಳಲುತ್ತಿರುವ ರೋಗಿಗೆ ಸಾಧ್ಯವಾದಷ್ಟು ಶೀಘ್ರವಾಗಿ ಚಿಕಿತ್ಸೆ ನೀಡಬೇಕಾಗುತ್ತದೆ. ರೋಗಿಗೆ ಒಂದು ಅಥವಾ ಎರಡು ಲೋಟ ಸ್ವಚ್ಛವಾದ ನೀರನ್ನು ಶೀಘ್ರದಲ್ಲಿ ನೀಡಿ ಸಾವಕಾಶವಾಗಿ ಕೈಬೆರಳುಗಳನ್ನು ಗಂಟಲಲ್ಲಿ ಹಾಕುವುದರ ಮೂಲಕ ವಾಂತಿ ಮಾಡಿಕೊಳ್ಳಲು ಪ್ರೇರೆಪಿಸಿರಿ. ತಕ್ಷಣವೇ ರೋಗಿಯನ್ನು ಸಮೀಪದ ಅಸ್ಪತ್ರೆಗೆ ಕರೆದೊಯ್ಯುವುದಾಗಲೀ ಅಥವಾ ವೈದ್ಯರನ್ನೇ ರೋಗಿ ಇದ್ದ ಕಡೆಗೆ ಕರೆತರುವುದಕ್ಕೂ ಮುಂಚೆ ಈ ಕೆಳಗಿನ ಪ್ರಥಮ ಚಿಕಿತ್ಸೆಯನ್ನು ನೀಡಬೇಕು.

**ಸೋಂಕು ಕಡಿಮೆಮಾಡಿಕೊಳ್ಳುವಿಕೆ :**



1 ರೋಗಿಗೆ ಚಿಕಿತ್ಸೆ ನೀಡುವಾಗ ಸ್ವಯಂ ಸೋಂಕಿಗೊಳಗಾಗದಂತೆ ಎಚ್ಚರ ವಹಿಸಿ.

2 ವ್ಯಕ್ತಿಯನ್ನು ವಿಷ ಚೆಲ್ಲಿದ ಸ್ಥಳದಿಂದ ಅಥವಾ ಇತರೆ ಮಲಿನಗೊಂಡ ಸ್ಥಳದಿಂದ ದೂರ ಕರೆದೊಯ್ಯಿರಿ.



3 ವಿಷದಿಂದ ಮಲೀನಗೊಂಡ ಬಟ್ಟೆ ಮತ್ತು ಪಾದರಕ್ಷೆಗಳನ್ನು ತಕ್ಷಣವೇ ತೆಗೆಯಿರಿ.



4 ಸಾಕಷ್ಟು ಶುದ್ಧ ನೀರನ್ನು ಬಳಸಿ ಪೀಡೆನಾಶಕವನ್ನು ಚರ್ಮ, ಕಣ್ಣುಗಳು ಮತ್ತು ತಲೆಗೂದಲಿಂದ ಸ್ವಚ್ಛಗೊಳಿಸಿರಿ.

5 ನೀರು ಇಲ್ಲದೆ ಇದ್ದ ಪಕ್ಷದಲ್ಲಿ ಕಾಗದ ಅಥವಾ ಬಟ್ಟೆಯಿಂದ ಚರ್ಮವನ್ನು ಸಾವಕಾಶವಾಗಿ ಒರೆಸಿರಿ, ನಂತರ ಅದನ್ನು ನಾಶಪಡಿಸಿ. ಒರಟಾಗಿ ಚರ್ಮವನ್ನು ಒರೆಸುವುದಾಗಲೀ ಅಥವಾ ಕೆರೆಯುವುದಾಗಲೀ ಮಾಡಬೇಡಿ.

6 ರೋಗಿಯು ಅತಿಯಾಗಿ ಉದ್ವೇಗಗಕ್ಕೆ ಒಳಗಾದಲ್ಲಿ ಅಥವಾ ಎದೆಗುಂದಿದಲ್ಲಿ ನಿರಂತರವಾಗಿ ಶಾಂತತೆಯಿಂದಿರಲು ಭರವಸೆ / ನಂಬಿಕೆ ನೀಡುವುದು ಅವಶ್ಯಕ



**ಸೂಚನೆಃ**

1) ಉಪ್ಪಿನ ನೀರನ್ನು ಕೊಡಬೇಡಿ.

2) ಬೀಡಿ ಸೇದಲು ಅಥವಾ ಸಾರಾಯಿ ಅಥವಾ ಹಾಲು ಕುಡಿಯುವುದನ್ನು ರೋಗಿ ಮಾಡಕೂಡದು. ಇದು ವಿಷವನ್ನು ಕರುಳಿನಿಂದ ಶೀಘ್ರವಾಗಿ ಹೀರಿಕೊಳ್ಳಲು ಅನುವು ಮಾಡಿಕೊಡುತ್ತವೆ.

3) ರೋಗಿಯನ್ನು ಆತನ ಒಂದು ಬದಿಯಲ್ಲಿ ಮಲಗಿಸಿ ತಲೆಯು ದೇಹದ ಇತರೆ ಭಾಗಗಳಿಗಿಂತ ಕೆಳಗಿರಲಿ. ಇದು ಶ್ವಾಸಕೋಶದ ಉರಿಯುವಿಕೆಯನ್ನು ಕಡಿಮೆ ಮಾಡುತ್ತದೆ.

4)ರೋಗಿಯು ಉಸಿರಾಟ ಕ್ರಿಯೆಯನ್ನು ಮತ್ತು ಪ್ರಜ್ಞೆಯಿರುವುದನ್ನು ಸೂಕ್ಷ್ಮ ರೀತಿಯಲ್ಲಿ ಗಮನಿಸಿ. ವಿಷದಿಂದ ಬಳಲುವ ವ್ಯಕ್ತಿಯು ಪ್ರಜ್ಞಾಹೀನನಾಗಿ ವಾಂತಿ ಮಾಡಿಕೊಳ್ಳಬಹುದು, ಅಲ್ಲದೆ ಉಸಿರಾಟ ನಿಂತು ಹೋಗಬಹುದು.